
# ಕಥೋಪದೇಶ



## ವಿವೇಕಾನಂದರು ಹೇಳಿದ ಕಥೆ

# ಮೂರು ವರಗಳು



**ಒಂದು** ಊರಿನಲ್ಲಿ ಹಾರು ಎಂಬ ಹೆಸರಿನ ಹುಡುಗನಿದ್ದ. ಅವನಿಗೆ ಮೊಂಡು ಮೂಗು, ತುಂಬ ಕುರೂಪಿಯಾಗಿ ಕಾಣುತ್ತಿದ್ದ. ಊರಿನವರೆಲ್ಲ ಅವನನ್ನು ಹಾಸ್ಯ ಮಾಡುತ್ತಿದ್ದರು.

ಅವನಿಗೆ ಮದುವೆಯ ವಯಸ್ಸಾಯಿತು. ಮೊಂಡು ಮೂಗಿನ ವಧುವನ್ನೇ ಅವನು ಆರಿಸಿಕೊಂಡ. ಕಾರಣ, ಸರಿಯಾದ ಮೂಗಿನವಳಾದರೆ ತನ್ನನ್ನು ಹಾಸ್ಯ ಮಾಡುತ್ತಾಳೆ ಎಂದು.

ಈಗ ಜನರು ಹಾಸ್ಯ ಮಾಡುವುದು ಇನ್ನೂ ಜಾಸ್ತಿಯಾಯಿತು. 'ಮೊಂಡು ಮೂಗಿನ ದಂಪತಿಗಳು' ಎಂದು ಅವರನ್ನು ಎಲ್ಲರೂ ಗೇಲಿ ಮಾಡುತ್ತಿದ್ದರು.

ಹಾರುವಿಗೆ ತುಂಬ ದುಃಖ. ಈ ಮೂಗಿನ ಸಮಸ್ಯೆಗೆ ಪರಿಹಾರವೇನು? ದೇವರನ್ನೇ ಆಶ್ರಯಿಸುವುದೆಂದು ತೀರ್ಮಾನಿಸಿದ. ಕಾಡಿಗೆ ಹೋಗಿ ದೇವರನ್ನು ಪ್ರಾರ್ಥಿಸ ತೊಡಗಿದ.

ದೇವರು ಒಲಿದು ಅವನಿಗೆ ಮೂರು ವರಗಳನ್ನು ಕರುಣಿಸಿದ. ಈ ಮೂರರಲ್ಲಿ ಏನು ಬೇಕಾದರೂ ಕೇಳಿಕೊ ಎಂದನು. ಹಾರು ಮನೆಗೆ ಹೋಗಿ ಪತ್ನಿಗೆ ಈ ವಿಷಯ ತಿಳಿಸಿದ. ಆಕೆ ಸಂಪತ್ತು ಬೇಕೆಂದು ಕೇಳಿಕೊಳ್ಳಿ ಎಂದಳು. ಹಾರು ಆಕೆಯ ಮಾತು ಕೇಳದೆ ತಮ್ಮಿಬ್ಬರಿಗೆ ಸುಂದರ ಮೂಗುಗಳು ಉಂಟಾಗಲಿ ಎಂದು ಮೊದಲನೆಯ ವರ ಕೇಳಿದನು.

ಅವರಿಬ್ಬರ ಮೈತುಂಬ ಮೂಗುಗಳಾದವು. ಪರಸ್ಪರ ತಮ್ಮ ವಿಕಾರ ರೂಪವನ್ನು ನೋಡಿಕೊಂಡು ಅವರು ಮತ್ತಷ್ಟು ದುಃಖಕ್ಕೀಡಾದರು. ಈಗೇನು ಮಾಡುವುದು? ಈ ಮೂಗುಗಳೆಲ್ಲ ಹೊರಟುಹೋಗಲಿ ಎಂದು ಎರಡನೆಯ ವರ ಕೇಳಿದ. ಆಗ ಮೊದಲೇ ಇದ್ದ ಮೊಂಡು ಮೂಗೂ ಹೊರಟುಹೋಯಿತು.


ಇನ್ನು ಒಂದೇ ವರ ಉಳಿದಿದೆ. ಪತ್ನಿ ಹೇಳಿದಳು : 'ಈ ಮೂರನೇ ವರದಲ್ಲಿ ಎರಡು ಸುಂದರ ಮೂಗುಗಳು ನಮ್ಮಿಬ್ಬರಿಗೆ ಬರಲೆಂದು ಕೇಳಿಕೊಂಡರೆ, ಜನರಿಗೆ ವರ ಪಡೆದ ವಿಷಯ ತಿಳಿಯುತ್ತದೆ. ದೇವರೇ ವರ ಕರುಣಿಸಿದರೂ ಐಶ್ವರ್ಯವನ್ನು ಕೇಳಿಕೊಳ್ಳದೆ ಬರಿ ಮೂಗನ್ನು ಕೇಳಿಕೊಂಡರೆಂದು ಎಲ್ಲರೂ ಹಾಸ್ಯ ಮಾಡುತ್ತಾರೆ. ಆದ್ದರಿಂದ ಮೊದಲಿನಂತೆ ಮೊಂಡು ಮೂಗೇ ಬರಲೆಂದು ಕೇಳಿಕೊಳ್ಳಿ.'

ಹಾರು ಹಾಗೇ ಮಾಡಿದ. ಮೊದಲಿನಂತೆಯೇ ಇಬ್ಬರೂ ಮೊಂಡು ಮೂಗಿನವರಾದರು.

**ಜೀವನದಲ್ಲಿ ಬರುವ ಪ್ರತಿಯೊಂದು ಅವಕಾಶವನ್ನೂ ಸರಿಯಾಗಿ ವಿವೇಚಿಸಿ ಉಪಯೋಗಿಸಿಕೊಳ್ಳಬೇಕು.** ❄

# ಒಗ್ಗಟ್ಟಿನಲ್ಲಿ ಬಲವಿದೆ


ಒಂದು ದೊಡ್ಡ ಕಾಡು. ಕಾಡಿನಲ್ಲೊಂದು ದೊಡ್ಡ ಆಲದ ಮರ. ಸಾವಿರಾರು ಪಕ್ಷಿಗಳು ಅಲ್ಲಿ ಆಶ್ರಯ ಪಡೆದಿದ್ದವು. ಮರದ ಮೇಲಿದ್ದ ಲಘುಪತನಕವೆಂಬ ಕಾಗೆ ಒಬ್ಬ ಬೇಟೆಗಾರ ಬರುವುದನ್ನು ನೋಡಿತು.



ಬೇಟೆಗಾರ ಮರದ ಬುಡದಲ್ಲಿ ಬಲೆಹಾಕಿ, ಅದರ ಮೇಲೆ ಅಕ್ಕಿಯ ಕಾಳುಗಳನ್ನು ಹರಡಿದನು. ಅಡಗಿ ಕೊಂಡು ಪಕ್ಷಿಗಳು ಬಂದು ಬೀಳುವುದನ್ನೇ ಎದುರು ನೋಡುತ್ತಿದ್ದನು. ಆದರೆ, ಲಘುಪತನಕ ಎಂಬ ಆ ಕಾಗೆ ಪಕ್ಷಿಗಳನ್ನು ಎಚ್ಚರಿಸಿತ್ತು. ಆದ್ದರಿಂದ ಒಂದೂ ಹಕ್ಕಿ ಬಂದು ಬೀಳಲಿಲ್ಲ.



ಆಗ ಆಕಾಶದಲ್ಲಿ ಹಾರುತ್ತಿದ್ದ ಪಾರಿವಾಳಗಳ ಗುಂಪೊಂದು ಅಕ್ಕಿ ಕಾಳು ತಿನ್ನುವ ಆಸೆಯಿಂದ, ಕೆಳಗಿಳಿದು ಬಂದು ಬೇಡನ ಜಾಲಕ್ಕೆ ಸಿಕ್ಕಿಬಿಟ್ಟಿತು.



ಪಾರಿವಾಳಗಳ ನಾಯಕ ಚಿತ್ರಗ್ರೀವ ಚತುರ ಪಕ್ಷಿ. ಒದಗಿಬಂದ ಸಂಕಟದ ಸಮಯದಲ್ಲಿ ಎದೆಗುಂದದೆ, ತಪ್ಪಿಸಿಕೊಳ್ಳಲು ಉಪಾಯ ಯೋಚಿಸಿ, ತನ್ನ ಪರಿವಾರದವರಿಗೆ ಹೇಳಿತು.

**ಚಿತ್ರಗ್ರೀವ:**
ಸೋದರರೇ, ಎದೆಗುಂದದಿರಿ. ಒಗ್ಗಟ್ಟಿನಿಂದ ಉಪಾಯ ಮಾಡಿದರೆ, ಈ ಕಷ್ಟದಿಂದ ಪಾರಾಗಬಹುದು. ನಾವೆಲ್ಲರೂ, ಒಮ್ಮೆಯೇ, ಬಲೆಯೊಡನೆಯೇ ಮೇಲೆ ಹಾರಿಬಿಡೋಣ. ಬೇಡನ ಕಣ್ಣಿಗೆ ಕಾಣದಂತೆ ದೂರಹೋಗಿ ಬಿಡೋಣ.



ಬಲೆಯ ಜೊತೆಗೇ ಪಾರಿವಾಳಗಳು ಮೇಲೆ ಹಾರಿಬಿಟ್ಟವು. ಇದನ್ನು ನೋಡಿ ಬೇಡ ದಿಗ್ಭ್ರಮೆಗೊಂಡ. ಅವುಗಳ ಹಿಂದೆ ತಾನೂ ಓಡಿದ. ಪಾರಿವಾಳಗಳು ಬೇಡನ ಕಣ್ಣು ತಪ್ಪಿಸಿ ಬಹುದೂರ ಸಾಗಿದವು.



ಆ ಪಾರಿವಾಳಗಳು ಹಿರಣ್ಯಕನೆಂಬ ಇಲಿಯ ಬಿಲದ ಹತ್ತಿರ ಬಂದು ಇಳಿದವು.

**ಚಿತ್ರಗ್ರೀವ:**
ಮಿತ್ರಾ ಹಿರಣ್ಯಕ! ನಾನು ನಿನ್ನ ಗೆಳೆಯನಾದ ಚಿತ್ರಗ್ರೀವ. ನಮ್ಮನ್ನು ಈ ಭಯಂಕರ ಸಂಕಟದಿಂದ ಪಾರುಮಾಡು.



**ಹಿರಣ್ಯಕ:**
ಏನಯ್ಯಾ ಚಿತ್ರಗ್ರೀವ ! ನಿನ್ನಂಥ ಬುದ್ಧಿವಂತನೂ ಹೀಗೆ ಬಲೆಗೆ ಸಿಕ್ಕಿಕೊಳ್ಳುವುದೇ ?



**ಚಿತ್ರಗ್ರೀವ:**
ವಿಧಿಯನ್ನು ಮೀರಲು ಯಾರಿಗೆ ಸಾಧ್ಯ ? ಮಿತ್ರ ! ಮೊದಲು ನಮ್ಮನ್ನು ಈ ಬಂಧನದಿಂದ ಬಿಡಿಸು. ನಂತರ ಬೇರೆ ಮಾತು.

ಹಿರಣ್ಯಕನು ಬಲೆಯನ್ನು ಹಲ್ಲುಗಳಿಂದ ಕಡಿದು ಎಲ್ಲರನ್ನೂ ಬಿಡಿಸಿದನು.

**ಹಿರಣ್ಯಕ:**
ಮಿತ್ರ! ನೀನು ಧನ್ಯ. ನಿನ್ನನ್ನು ರಾಜನನ್ನಾಗಿ ಪಡೆದ ಈ ಪಾರಿವಾಳಗಳೂ ಧನ್ಯ.



ಒಗ್ಗಟ್ಟಿನಿಂದ ಇದ್ದರೆ ಎಂತಹ ಕಷ್ಟ, ಪರಿಸ್ಥಿತಿಯಿಂದಲೂ ಪಾರಾಗಬಹುದು. ಒಳ್ಳೆಯ ಸ್ನೇಹಿತನಿದ್ದರೆ ಅವನು ಕಷ್ಟದ ಸಂದರ್ಭದಲ್ಲಿ ನಮಗೆ ನೆರವಾಗುವನು. ಇದೇ ಈ ಕಥೆಯ ನೀತಿ.

ಕಲೆ : ರಾಮಗೌತಮ